**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ .**

**ಎಸ್.ಸಿ. ನಂ.28/2024**

**ದಿನಾಂಕಃ 08 ನೇ ಜುಲೈ ಮಾಹೆ 2025**

**ಫಿರ್ಯಾದುದಾರರು** ಃ ಗ್ರಾಮಾಂತರ ಪೊಲೀಸ್ ಠಾಣೆ ದಾವಣಗೆರೆ.

-/ **ವಿರುದ್ಧ** /-

**ಆರೋಪಿ /ತರು** ಃ ಕುಮಾರ್ ಬಿ. ಮತ್ತು ಇತರರು

**ದೋಷಾರೋಪಣೆ**

ಶ್ರೀಯುತ ಃ **ಎಂ.ಹೆಚ್. ಅಣ್ಣಯ್ಯನವರ** ಬಿಕಾಂ.ಎಲ್.ಎಲ್.ಬಿ. (ವಿಶೇಷ), 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಾವಣಗೆರೆ, ಆದ ನಾನು ನಿಮ್ಮನ್ನು ಅಂದರೆ,

1. ಕುಮಾರ ಬಿ. ಬಿನ್ ಬಸವರಾಜ, ವಯಸ್ಸು 26 ವರ್ಷ, ವಾಸ 2 ನೇ ಮೇನ್, 16 ನೇ ಕ್ರಾಸ್, ಕೆಟಿಜೆ ನಗ, ದಾವಣಗೆರೆ ಸಿಟಿ.
2. ಮಂಜುನಾಥ ಯು.ಎಸ್. ಬಿನ್ ಸುರೇಶ್ ಯು.ಟಿ., ವಯಸ್ಸು 24 ವರ್ಷ, ಆಟೋ ರಿಕ್ಷಾ ಡ್ರೈವರ್, ವಾಸ ಜನತಾ ಕಾಲೋನಿ, ಹಳೇ ಕುಂದುವಾಡ, ದಾವಣಗೆರೆ.
3. ಪ್ರವೀಣ್ ಕುಮಾರ್ ಎ.ಬಿ. ಬಿನ್ ಬಸವರಾಜಪ್ಪ, ವಯಸ್ಸು 22 ವರ್ಷ, ಡ್ರೈವರ್ ಕೆಲಸ, ವಾಸ ಅಣಬೇರು ಗ್ರಾಮ, ದಾವಣಗೆರೆ ತಾಲ್ಲೂಕು, ದಾವಣಗೆರೆ.
4. ಪರಶುರಾಮ ಬಿನ್ ಜಗದೀಶಪ್ಪ, ವಯಸ್ಸು 19 ವರ್ಷ, ವಿದ್ಯಾರ್ಥಿ, ವಾಸ ಅಣಬೇರು ಗ್ರಾಮ, ದಾವಣಗೆರೆ

ತಾಲ್ಲೂಕು, ದಾವಣಗೆರೆ.

5. ಶಿವಕುಮಾರ್ ಡಿ. ಬಿನ್ ದುರುಗಪ್ಪ, ವಯಸ್ಸು 21 ವರ್ಷ, ವಿದ್ಯಾರ್ಥಿ, ವಾಸ ಬಾಡಾ ಗ್ರಾಮ, ಮಂಡಲಪಂಚಾಯ್ತಿ ಹಿಂಭಾಗ, ಭೋವಿ ಕಾಲೋನಿ, ದಾವಣಗೆರೆ ತಾಲ್ಲೂಕು, ದಾವಣಗೆರೆ.

ಆರೋಪಿಗಳಾದ ನಿಮ್ಮ ಮೇಲಿನ ದೋಷಾರೋಪಣೆ ಈ ಕೆಳಕಂಡಂತೆ ಇರುತ್ತದೆ.

ದಿಃ31/10/2023 ರಂದು ಬೆಳಗಿನ ಜಾವ 1-30 ಗಂಟೆ ಸಮಯದಲ್ಲಿ ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಆರೋಪಿತರು ದರೋಡೆ ಮಾಡುವ ಉದ್ದೇಶದಿಂದ 2 ನೇ ಆರೋಪಿತನ ನಂಬರ್ ಪ್ಲೇಟ್ ಇಲ್ಲದ ಪ್ಯಾಸೆಂಜರ್ ಆಟೋದಲ್ಲಿ ಬಂದು ಚಾಸಾ.1 ಸುರೇಶ, ಚಾಸಾ.2 ಪ್ರದೀಪ್, ಚಾಸಾ.3 ಅಮಿತ್ ರವರಿಗೆ ಎಲ್ಲರೂ ಸೇರಿ ಹಿಡಿದುಕೊಂಡು ಚಾಕು ತೋರಿಸಿ ಹೆದರಿಸಿ ಕೈಗಳಿಂದ ಹಲ್ಲೆ ಮಾಡಿ 1 ನೇ ಆರೋಪಿತನು ಚಾಸಾ.1 ರವರ ಬಳಿ ಇದ್ದ ರೂ.15,000 ನಗದು ಹಣ ಮತ್ತು ಒಂದು ರೆಡ್ಮಿ ಮೊಬೈಲ್ ಫೋನ್ ಕಿತ್ತುಕೊಂಡು, 3 ನೇ ಆರೋಪಿ ಚಾಸಾ.3 ರವರ ಬಳಿ ಇದ್ದ ಒಂದು ರೆಡ್ಮಿ ಮೊಬೈಲ್ ಫೋನ್ ಕಿತ್ತುಕೊಂಡು ಎಲ್ಲರ ಮೇಲೆ ಹಲ್ಲೆ ಮಾಡಿ ದರೋಡೆ ಮಾಡಿರುತ್ತಾರೆ. ಹಾಗಾಗಿ ಆರೋಪಿತರಾದ ನೀವು ಭಾ.ದಂ.ಸಂ. ಕಲಂ.395 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೇಲಿನ ಆರೋಪಕ್ಕೆ ನಿಮ್ಮನ್ನು ಗುರಿಪಡಿಸಿ ಈ ನ್ಯಾಯಾಲಯದಲ್ಲಿ ವಿಚಾರಣೆ ನಡೆಯಬೇಕೆಂದು ನಿರ್ದೇಶಿಸಲಾಗಿದೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ**

**ಎಸ್.ಸಿ. ನಂ.28/2024**

5. ಶಿವಕುಮಾರ್ ಡಿ. ಬಿನ್ ದುರುಗಪ್ಪ, ವಯಸ್ಸು 21 ವರ್ಷ, ವಿದ್ಯಾರ್ಥಿ, ವಾಸ ಬಾಡಾ ಗ್ರಾಮ, ಮಂಡಲಪಂಚಾಯ್ತಿ ಹಿಂಭಾಗ, ಭೋವಿ ಕಾಲೋನಿ, ದಾವಣಗೆರೆ ತಾಲ್ಲೂಕು, ದಾವಣಗೆರೆ.

**ಆರೋಪಣೆ**

ಪ್ರಶ್ನೆ 1 ಈಗ ಓದಿ ಹೇಳಿದ ಆಪಾದನೆ ನಿನಗೆ ತಿಳಿಯಿತೆ?
ಉತ್ತರ ಃ

ಪ್ರಶ್ನೆ 2 ನೀನು ತಪ್ಪನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕೇ?
ಉತ್ತರ ಃ

(ಮೇಲೆ ನಮೂದು ಮಾಡಿದ ಆರೋಪಿಯ ಹೇಳಿಕೆಯನ್ನು ತನ್ನ ಸಮಕ್ಷಮದಲ್ಲಿ ತೆಗೆದುಕೊಂಡಿದ್ದು ಸದರಿ ಹೇಳಿಕೆಯು ಆರೋಪಿ ನೀಡಿದ ನಿಜವಾದ ಹೇಳಿಕೆ ಇರುತ್ತದೆ.)

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.